ಪ್ರಮುಖ ಕೆಲಸವನ್ನು ಏತಕ್ಕೆ ಮಾಡಿಸಬಾರದು ? ಇದಕ್ಕಾಗಿ ಹಣ ಇದೆ, ಆಳುಗಳು ಸಿಕ್ಕುತ್ತಾರೆ, ಎಸ್ಟಿಮೇಟ್ ತಯಾರಾಗಿದೆ. ಆದರೂ ಈ ಕೆಲಸವನ್ನು ತಡಮಾಡುತ್ತಿರುವ ಉದ್ದೇಶವೇನು ? ದಯವಿಟ್ಟು ಬೇರೆ ಕೆಲಸಗಳನ್ನು ನಿಲ್ಲಿಸಿ ಈ ಕೆಲಸವನ್ನು ತೀವ್ರಗತಿಯಿಂದ ಮಾಡಿಸಿಕೊಡುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯವು ಏನೆಂಬುದು ನನಗೆ ಅರ್ಥವಾಗುತ್ತಿದೆ. ಕೆಲಸ ತಡವಾಯಿತು ಎಂದು ಹೇಳಿದರು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ಆದರೆ ದುಡ್ಡು ಹೊಡೆಯುವುದಕ್ಕೆ ಈ ರೀತಿ ಮಾಡುತ್ತಿದ್ದಾರೆಂದು ಹೇಳಿದರು. ಇದು ಬಹಳ ಗಂಭೀರವಾದ ಪ್ರಶ್ನೆಯಾಗುತ್ತದೆ: ದುಡ್ಡು ಯಾರು ಹೊಡೆಯುತ್ತಾರೆಂಬುದು ಇಲ್ಲಿ ರೆಕಾರ್ಡ್‌ಗೆ ಹೋಗುತ್ತದೆ. ಆದ್ದರಿಂದ ನಾನು ಇಷ್ಟುಮಾತ್ರ ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ. ಈ ಕೆಲಸಕ್ಕೆ ಎಲ್ಲಿ ಸಿದ್ಧತೆಗಳೂ ಆಗಿವೆ. ಇದು ಕಾರ್ಯಾಚರಣೆಯ ಹಂತದಲ್ಲಿದೆ, ೧೯೯೦-೯೧ನೇ ಸಾಲಿನಲ್ಲಿ ಮಾನ್ಯ ಸದಸ್ಯರು ಮತ್ತೆ ಈ ಪ್ರಶ್ನೆಯನ್ನು ಇಲ್ಲಿ ಕೇಳದಂಥ ರೀತಿಯಲ್ಲಿ ಮಾಡಿಮುಗಿಸುತ್ತೇವೆಂದು. ಹೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ್ರು.— ದುಡ್ಡನ್ನು ಹೊಡೆಯುತ್ತಾರೆ ಎಂದರೆ ಮಾನ್ಯ ಮಂತ್ರಿಗಳು ದುಡ್ಡನ್ನು ಹೊಡೆಯುತ್ತಾರೆ ಅಂತ ಅಲ್ಲ. ಅಲ್ಲಿರತಕ್ಕ ಇಂಜಿನಿಯರ್‌ಗಳು ಇನ್ನು ಬೇರೆ ಬೇರೆಯವರು ಅವರಿವರ ಹೆಬ್ಬೆಟ್ಟನ್ನು ಒತ್ತಿ ಹಣವನ್ನು ಖರ್ಚುಮಾಡಿದ್ದೇವೆಂದು ತೋರಿಸುತ್ತಾರೆ. ಮಾನ್ಯ ಮಂತ್ರಿಗಳು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಇವರು ದುಡ್ಡನ್ನು ಹೊಡೆಯುವುದಕ್ಕೆ ಮಾಡುತ್ತಿದ್ದಾರೆಂದು ನಾನು ಹೇಳಲಿಲ್ಲ. ಈ ರೋಜ್‌ಗಾರ್ ಯೋಜನೆಯಲ್ಲಿ ಎಷ್ಟು ಕೆಲಸಗಳನ್ನು ಕಂಟ್ರಾಕ್ಟ್ ದಾರರಿಗೆ ಕೊಡದೆ ನಿಯಮಗಳ ಪ್ರಕಾರ ಆಗಿದ ಎಂಬುದನ್ನು ತಾವು ತಿಳಿಸಬೇಕು. ಇದನ್ನು ತಾವು ಪರಿಶೀಲನೆ ಮಾಡಿ ಮುಂದಿನ ಸದನದಲ್ಲಿ ನನಗೆ ಉತ್ತರಕೊಡಿ ಆದರೆ ಅದಷ್ಟು ಜಾಗ್ರತೆ ಈ ಕೆಲಸವನ್ನು ಕೈಗೆ ತೆಗೆದುಕೊಂಡು ಮುಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಈ ಕೆಲಸವನ್ನು ೧೯೯೦-೯೧ರ ಸಾಲಿನಲ್ಲಿ ಪ್ರಾರಂಭಿಸುತ್ತೇವೆ ಎಂದು ಹೇಳಿದ್ದೇನೆ. ಆದರೆ ಮಾನ್ಯ ಸದಸ್ಯರು ಮಾತನಾಡುವಾಗ ಇಂಜಿನಿಯರ್‌ಗಳು ಅಥವಾ ಬೇರೆಯವರು ದುಡ್ಡನ್ನು ಹೊಡೆಯುತ್ತಿದ್ದಾರೆಂದು ಹೇಳಿದರು, ಯಾರು ದುಡ್ಡನ್ನು ಹೊಡೆಯುತ್ತಿದ್ದಾರೆಂಬುದನ್ನು ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಹೇಳಿದರೆ ಅವರು ಎಷ್ಟೇ ದೊಡ್ಡ ಅಧಿಕಾರಿಯಾಗಿರಲಿ ಅವರನ್ನು ಸ್ಥಳದಲ್ಲಿಯೇ ಅಮಾನತ್ತಿನಲ್ಲಿಡುತ್ತೇನೆ ಮತ್ತು ಅವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

(ಚು ಪ್ರ-೨೦೬ (೪೨೯)

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಬೆಳಗಾವಿಯಲ್ಲಿ ತಾಂತ್ರಿಕ ವಿಶ್ವ ವಿದ್ಯಾಲಯ ಸ್ಥಾಪನೆ

೪೪೩. ಶ್ರೀ ಎಸ್. ಹೆಚ್. ಕಾಜಲಗಿ (ಬೈಲಹೊಂಗಲ),— ಮಾನ್ಯ ಶಿಕ್ಷಣ ಯುವಜನ ವ್ಯವಹಾರಗಳು, ಕ್ರೀಡೆಗಳು ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿಯಲ್ಲಿ ತಾಂತ್ರಿಕ ವಿಶ್ವ ವಿದ್ಯಾಲಯದ ಕಾರ್ಯ ಎಂದಿನಿಂದ ಪ್ರಾರಂಭವಾಗುವುದು ;

ಆ) ಈಗ ಅದು ಯಾವ ಹಂತದಲ್ಲಿದೆ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಈ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವ ಬಗ್ಗೆ ಯಾವುದೇ ದಿನಾಂಕವನ್ನು ನಿಗದಿ ಪಡಿಸಿಲ್ಲ.

ಆ) ಈ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಹೆಚ್. ಕಾಜಗಿ.— ಮಾನ್ಯ ಅಧ್ಯಕ್ಷರೆ, '' ಬೆಳಗಾವಿಯಲ್ಲಿ ತಾಂತ್ರಿಕ ವಿಶ್ವ ವಿದ್ಯಾಲಯದ ಕಾರ್ಯ ಎಂದಿನಿಂದ ಪ್ರಾರಂಭವಾಗುವುದು ? ಎಂಬ ನನ್ನ ಪ್ರಶ್ನೆಗ'' ಈ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವ ಬಗ್ಗೆ ಯಾವುದೇ ದಿನಾಂಕವನ್ನು ನಿಗದಿಪಡಿಸಿಲ್ಲ ಎಂದು ಮಾನ್ಯ

ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರ ನಿಜಕ್ಕೂ ಬಹಳ ವಿಚಿತ್ರವಾಗಿದೆ. ಈಗ ಇದು ಯಾವ ಹಂತದಲ್ಲಿದೆ ? ಎಂದು ಎರಡನೇ ಪ್ರಶ್ನೆಯನ್ನು ನಾನು ಕೇಳಿದ್ದೆವು ದಕ್ಕೆ '' ಈ ವಿಷಯ ಪರಿಶೀಲನೆಯಲ್ಲಿದೆ '' ಎಂದು ಹೇಳಿದ್ದಾರೆ. ಕಳೆದ ಸಾರಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬೆಳಗಾಂನಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುತ್ತೇವೆ '' ಎಂದು ಹೇಳಲಾಗಿತ್ತು. ಆಗ ಬೆಳಗಾಂ ಮತ್ತು ಉತ್ತರ ಕನ್ನಡದ ಜನರು ಬಹಳ ಸಂತೋಷವನ್ನು ಪಟ್ಟಿದ್ದರು. ಆದರೆ ಈ ಕಾರ್ಯವನ್ನು ಕೂಡಲೇ ಪ್ರಾರಂಭಿಸುವುದನ್ನು ಬಿಟ್ಟು ನನ್ನ ಎರಡನೇ ಪ್ರಶ್ನೆಗೆ ''ಈ ವಿಷಯ ಪರಿಶೀಲನೆಯಲ್ಲಿದೆ '' ಎಂದು ಹೇಳುತ್ತಿದ್ದಾರೆ. ಕಳೆದ ಸಾರಿ ನಾನು ಈ ಪ್ರಶ್ನೆಯನ್ನು ಕೇಳಿದಾಗ, ಈ ಬಗ್ಗೆ ರೂಪರೇಷೆಗಳನ್ನು ತಯಾರಿಸುವಂತೆ ಚೀಫ್ ಇಂಜಿನಿಯರ್‌ರವರಾದ ಶ್ರೀ ಬಾಳೆಕುಂದ್ರಿಯವರನ್ನು ನಾವು ಕೇಳಿಕೊಂಡಿದ್ದೇವೆಂದು ಹೇಳಿದ್ದರು ಈ ಕೆಲಸವನ್ನು ಆದ್ಯತೆಯ ಮೇಲೆ ಪ್ರಾರಂಭ ಮಾಡಬೇಕು. ಈ ಕೆಲಸವನ್ನು ಎಂದು ಪ್ರಾರಂಭಿಸುತ್ತೀರೆಂಬ ಬಗ್ಗೆ ನಿರ್ದಿಷ್ಟವಾದ ತಾರೀಖಿನ್ನು ಖಚಿತವಾಗಿ ಹೇಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಈ ಕೆಲಸಕ್ಕೆ ಸಾಕಷ್ಟು ಹಣ ಬೇಕಾಗುತ್ತದೆ. ಮಾನ್ಯ ಬಳೆಕುಂದ್ರಿಯವರು ಒನ್ ಮ್ಯಾನ್ ಕಮಿಷನ್ ಆಗಿದ್ದುದರಿಂದ ಅವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ ಅದನ್ನು ಸರ್ಕಾರ ಪರಿಶೀಲಿಸಿದೆ. ಅದರ ಪ್ರಕಾರ ವೆಚ್ಚದಲನೇ ೮ ವರ್ಷಗಳಿಗೆ ೨೨.೧೫ ಕೋಟಿ ರೂಪಾಯಿಗಳು ಬೇಕಾಗುತ್ತದೆಂಬ ಅಂದಾಜಿದೆ ರೆಕರಿಂಗ್‌ಎಕ್ಸ್‌ಪೆಂಡಿಚರ್ ಒಂದು ವರ್ಷಕ್ಕೆ ೨.೮ ಕೋಟಿ ರೂಪಾಯಿ ಬೇಕಾಗುತ್ತದೆಂದು ಅಭಿಪ್ರಾಯವಿದೆ. ಆರ್ಥಿಕ ಪರಿಸ್ಥಿತಿ ಈ ಕೆಲಸಕ್ಕೆ ಅಡ್ಡಿ ಬಂದಿದೆ. ಆದರೆ ಈ ಕೆಲಸವನ್ನು ಮಾಡಬಾರದೆಂಬ ಉದ್ದೇಶ ನಮ್ಮ ಸರ್ಕಾರಕ್ಕಿಲ್ಲ. ಆದ್ದರಿಂದ ೧೯೬೯-೭೦ರಲ್ಲಿ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ ಈ ವರ್ಷ ಕನ್ನಡ ಯೂನಿವರ್ಸಿಟಿಗೆ ಆದ್ಯತೆಯನ್ನು ಕೊಟ್ಟಿರುವುದರಿಂದ ಇದರ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಎಸ್. ಹೆಚ್. ಕೌಜಲಗಿ.—ಮಾನ್ಯ ಮುಖ್ಯ ಮಂತ್ರಿಗಳು ಬೆಳಗಾಂಗೆ ಪ್ರವಾಸ ಬಂದಿದ್ದಾಗ ಈ ತಾಂತ್ರಿಕ ವಿಶ್ವವಿದ್ಯಾನಿಲಯಕ್ಕೆ ಬೇಕಾದ ಸ್ಥಳವನ್ನು ಕೊಡುವುದಾಗಿ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಹೇಳಿದ್ದರು. ಈಗ ಅಲ್ಲಿ ಈ ತಾಂತ್ರಿಕ ವಿಶ್ವವಿದ್ಯಾಲಯವನ್ನು ತೆರೆಯಲು ಕಟ್ಟಡ ಇದೆ, ಅಲ್ಲದೆ ಹೆಚ್ಚು ಖರ್ಚು ಬರುವುದಿಲ್ಲವಾದ್ದರಿಂದ ಈ ಸಾರಿ ಈ ಕೆಲಸವನ್ನು ಪ್ರಾರಂಭ ಮಾಡುತ್ತೀರಾ ?

ಎರಡನೆಯದಾಗಿ ಖಾಸಗಿ ಮ್ಯಾನೇಜ್‌ಮೆಂಟಿನ ತಾಂತ್ರಿಕ ಕಾಲೇಜ್‌ಗಳವರು ಒಂದೆರಡು ವರ್ಷಗಳವರೆಗೆ ಹಣವನ್ನು ಕೊಡುತ್ತೇವೆಂದು ಹೇಳಿದರೂ ಮಾನ್ಯ ಸವನೂರ್ ಶಿವಸಂಗಪ್ಪ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದ ಕಾಲದಲ್ಲಿ ಈ ಮಾತನ್ನು ಹೇಳಿದ್ದರು ಆಗ ನಾನು ಸಹ ಅಲ್ಲಿದ್ದೆ. ತಾಂತ್ರಿಕ ವಿಶ್ವವಿದ್ಯಾನಿಲಯಕ್ಕೆ ಏನಾದರು ಸಹಾಯಬೇಕಾದರೆ ಪ್ರೈವೇಟ್ ಮ್ಯಾನೇಜ್‌ಮೆಂಟ್ ಮೂಲಕ ಸಹಾಯ ಮಾಡಲು ತಯಾರಾಗಿದ್ದೇವೆ. ಆದ ಕಾರಣ ಆದಷ್ಟು ಜಾಗ್ರತೆ ಪ್ರಾರಂಭ ಮಾಡಿ ಎಂದು ಹೇಳಿದ್ದರು. ಬೆಳಗಾಮ್ ಜಿಲ್ಲೆಯವರನ್ನು ಯಾರೂ ಕೇಳುವವರಿಲ್ಲ. ಬೆಳಗಾಮ್ ಜಿಲ್ಲೆ ಎಂದರೆ ಅದು ಒಂದು ಹೆಣ್ಣು ಡಿಪ್ಪಿಕ್ಟ್ ಎಂದು ತಿಳಿದುಕೊಂಡಿದ್ದಾರೆ. ಅಲ್ಲಿಗೆ ಒಬ್ಬರು ಮಂತ್ರಿಗಳು ಸಹ ಇಲ್ಲ. ಡೆವಲಪ್‌ಮೆಂಟ್ ವರ್ಕ್ಸ್ ಬಜೆಟ್‌ನಲ್ಲಿ ಬರುತ್ತದೆ, ಆದರೆ ಕೆಲಸಗಳೇನು ಆಗುತ್ತಿಲ್ಲ, ನಿಜವಾಗಿಯೂ ನಾನು ನಿರ್ದಿಷ್ಟವಾಗಿ ಕೇಳುತ್ತೇನೆ, ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ಡಿವಿಷನಲ್ ಹೆಡ್‌ಕ್ವಾರ್ಟರ್ಸ್‌ಗೆ ಎಲ್ಲವನ್ನು ತರಬೇಕು, ಬೆಳಗಾಂ ಅನ್ನು ಆಳಿಬೇಕೆಂದು ಸೂಚನೆ ಮಾಡಿದ್ದರು, ಅದರ ಪ್ರಕಾರ ಹಿಂದಿನ ಸರ್ಕಾರ ಬೆಳಗಾಮ್‌ನಲ್ಲಿ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಂಡರೆ ಅನುಕೂಲವಾಗುತ್ತದೆಂದು ಹೇಳಿ ಇಲ್ಲಿಗೆ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಕೊಟ್ಟಿದ್ದರು. ಆದ್ದರಿಂದ ನಿರ್ದಿಷ್ಟವಾಗಿ ಮಾನ್ಯ ಮಂತ್ರಿಗಳು ಎಷ್ಟೇ ಒತ್ತಡವಿದ್ದರೂ ಸಹಿತ ಹಣಕಾಸಿನ ತೊಂದರೆ ಇದ್ದರೂ ಸಹಿತ ಇದನ್ನು ಬೇಗ ಪ್ರಾರಂಭಿಸಬೇಕೆಂದು ಮತ್ತು ನಿರ್ದಿಷ್ಟವಾದ ತಾರೀಖಿನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಕೆ. ಹೆಚ್. ಪಾಟೀಲ್‌ರವರೇ ಉತ್ತರ ಕರ್ನಾಟಕದ ಪರಿಸ್ಥಿತಿ ಎಲ್ಲಿಗೆ ಬಂತೆಂದು ತಾವೇ ನೋಡಿ. ತಾವೇ ಈ ಬಗ್ಗೆ ಕೇಳಿ.

ಶ್ರೀ ಕೆ. ಹೆಚ್. ರಂಗನಾಥ್,—ಮಾನ್ಯ ಪಾಟೀಲ್ ಅವರು ಪ್ರಶ್ನೆಯನ್ನು ಕೇಳುವ ಪರಿಸ್ಥಿತಿಯಲ್ಲಿಲ್ಲ. ಅವರು ಉತ್ತರವನ್ನು ಹೇಳುವ ಸ್ಥಿತಿಯಲ್ಲಿದ್ದಾರೆ.

ಶ್ರೀ ಎಸ್. ಎಚ್. ಕೌಜಲಗಿ.—ಮಾನ್ಯ ಪಾಟೀಲ್ ಅವರು ನಮ್ಮ ಡಿಪ್ಟಿಕ್ಟ್ ಮಂತ್ರಿಗಳು, ಮಾನ್ಯ ಬಸವಲಿಂಗಪ್ಪನವರು ನಮ್ಮ ಡಿವಿಜನ್ ಮಿನಿಸ್ಟರ್ ನಾವುಇಲ್ಲಿ ಏನೇ ಪ್ರಶ್ನೆಯನ್ನು ಕೇಳಿದರೂ ಸಹಿತ ಪರಿಶೀಲನೆಯಲ್ಲಿದೆ ಎಂಬ ಉತ್ತರವನ್ನು ಕೊಡುತ್ತಿರುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್. — ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಕೊಟ್ಟಿರತಕ್ಕಂಥ, ಉತ್ತರವನ್ನು ಮಾನ್ಯ ಸದಸ್ಯರು ಉಲ್ಲೇಖ ಮಾಡಿದ್ದಾರೆ. ಸರ್ಕಾರದವರು ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದರೂ ಸಹ ಅದು ಹಣಕಾಸಿನ ಪರಿಸ್ಥಿತಿಗೆ ಒಳಗಾಗುತ್ತದೆ. ಇವತ್ತು ಕನ್ನಡ ವಿಶ್ವವಿದ್ಯಾನಿಲಯಕ್ಕೆ ಆದ್ಯತೆಯನ್ನು ಕೊಟ್ಟು, ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ, ಅದೇ ರೀತಿ ಇದನ್ನು ಸಹ ಪ್ರಾರಂಭ ಮಾಡಲು ಸಾಕಷ್ಟು ಹಣ ಬೇಕಾಗುತ್ತದೆ. ಇದನ್ನು ಪ್ರಾರಂಭ ಮಾಡುತ್ತೇವೆಂದು ಕೈಗೆತ್ತಿ ಕೊಂಡರೆ ಮೊದಲು ಎಂಟು ವರ್ಷಗಳಿಗೆ ಅವರು ಕೊಟ್ಟಿರತಕ್ಕಂಥ ರಿಪೋರ್ಟ್ ಪ್ರಕಾರ ೨೨-೧೫ ಕೋಟಿ ಬೇಕಾಗುತ್ತದೆ. ಜೊತೆಗೆ ಪ್ರತಿವರ್ಷ ೨. ಕೋಟಿ ೮ ಲಕ್ಷ ರೂಪಾಯಿಗಳ ರೆಕರಿಂಗ್ ಎಕ್ಸ್‌ಪೆಂಡಿಚರ್ ಬರುತ್ತದೆಂದು ಕವಿಷನ್ ರಿಪೋರ್ಟ್‌ನಲ್ಲಿದೆ ನಾಳೆ ಇದನ್ನು ತೆಗೆದುಕೊಂಡರೆ. ಖರ್ಚು ಎಷ್ಟಾಗುತ್ತದೋ ಹೇಳಲಿಕ್ಕೆ ಬರುವುದಿಲ್ಲ. ನಮಗೆ ಹೆಚ್ಚು ಹಣ ಬೇಕಾಗಿರುವುದರಿಂದ ಇದನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಸಿ. ಬೈರೇಗೌಡ —ಮಾನ್ಯ ಅಧ್ಯಕ್ಷರೇ, ಮೊದಲು ಈ ವಿಶ್ವವಿದ್ಯಾನಿಲಯವನ್ನು ಸರ್ ಎಂ. ವಿಶ್ವೇಶ್ವರಯ್ಯನವರು ಹುಟ್ಟಿದಂಥ ಮುದ್ದೇನಹಳ್ಳಿಯಲ್ಲಿ ಸ್ಥಾಪನೆ ಮಾಡಬೇಕೆಂದು ಒಂದು ಪ್ರಯತ್ನ ನಡೆದಿದ್ದುದು ನಿಜವೇ ? ಆ ರೀತಿ ಪ್ರಯತ್ನ ನಡೆದಿದ್ದರೆ ಇಲ್ಲಿ ಬಿಟ್ಟು ಈಗ ಬೆಳಗಾವಿನಲ್ಲಿ ಸ್ಥಾಪನೆ ಮಾಡಲು ಕಾರಣವೇನು ? ಮುದ್ದೇನಹಳ್ಳಿಯಲ್ಲಿಯೇ ಈ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲು ಪ್ರಯತ್ನ ಮಾಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಬೆಳಗಾವಿನಲ್ಲಿ ಶ್ರೀ ಬಾಳಿಕುಂದ್ರಿ ಅವರ ರಿಪೋರ್ಟ್‌ನಲ್ಲಿ ಹೇಳಿರುವಂತೆ ಇದನ್ನು ಪ್ರಾರಂಭ ಮಾಡಬೇಕಾಗಿದೆ ಅಲ್ಲಿ ಬಿಟ್ಟು ಬೆಂಗಳೂರಿನಲ್ಲಿಯೇ ಪ್ರಾರಂಭ ಮಾಡಲಿ, ಮುದ್ದೇನಹಳ್ಳಿಯಲ್ಲಿಯೇ ಪ್ರಾರಂಭ ಮಾಡಲಿ ಎಲ್ಲಿ ಪ್ರಾರಂಭ ಮಾಡಿದರೂ ಸಹ ಅದು ಕರ್ನಾಟಕದಲ್ಲಿಯೇ ಇರುತ್ತದೆ.

ಬೆಳೆಗಳಿಗೆ ರೋಗ ತಗುಲಿರುವುದು

೭೦೭. ಶ್ರೀ ಆರ್ ಎನ್. ನಾಯಕ್ (ಭಟ್ಕಳ) — ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಡಿಕೆ ಮತ್ತು ಬಾಳೆ ಹಾಗೂ ಏಲಕ್ಕಿ. ವಿಳ್ಳೆದಲೆ ಬೆಳೆಗಳಿಗೆ ಉತ್ತರ ಕನ್ನಡ, ದಕ್ಷಿಣ ಕನ್ನಡ ಶಿವಮೊಗ್ಗ ಜಿಲ್ಲೆಗಳಲ್ಲಿ ಸುಳಿಕಟ್ಟುವ ಅಥವಾ ಕಟ್ಟೆರೋಗ ಅಥವಾ ಬೇರುಹುಳ ರೋಗ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅಂಥ ರೋಗಕ್ಕೆ ಪ್ರತಿಬಂಧಕ ಉಪಾಯವನ್ನೇನಾದರೂ ಕಂಡು ಹಿಡಿಯಲಾಗಿದೆಯೇ ಹಾಗೂ ತಡೆಗಟ್ಟಲು ಕ್ರಮಕೈಗೊಳ್ಳಲಾಗುವುದೆ ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು).

ಅ) ಬಂದಿವೆ

ಆ) ಹೌದು

ಶ್ರೀ ಆರ್. ಎನ್. ನಾಯಕ್.— ನನ್ನ (ಆ) ಪ್ರಶ್ನೆಗೆ 'ಹೌದು' ಎಂದು ಉತ್ತರ ಕೊಟಿದ್ದಾರೆ. ಸುಮಾರು ೧೦-೧೫ ವರ್ಷಗಳಿಂದ ಎಷ್ಟೋ ತೋಟಗಳಲ್ಲಿ ಬಾಳೆ ಗಿಡಗಳು ಇಲ್ಲವಾಗಿವೆ. ಕಳೆದ ೪-೫ ವರ್ಷಗಳಿಂದ ವೀಳ್ಳೆದಲೆಗೆ ಮಳೆಗಾಲದ ಕೊನೆಯ ಹಂತದಲ್ಲಿ ಒಣಗಿ ಹೋಗುವ ಸಂದರ್ಭ ಇದೆ. ರೈತರಿಗೆ ಏಕೆ ಈ ರೀತಿ ಆಗುತ್ತಿದೆ ಎಂದು ಗೊತ್ತಾಗಿಲ್ಲ. ಹಿಂಗೆ ಮೆಣಸಿನ ಬಳ್ಳಿ ಹಾಗೂ ಕೆಲವು ಕಡೆ ಅಡಿಕೆ ಗಿಡಕ್ಕೆ ಸುಳಿಕಟ್ಟುವ ರೋಗ ಬಂದಿದೆ. ಈ ರೋಗಗಳಿಗೆ ಔಷಧಿಗಳನ್ನು ಕಂಡುಹಿಡಿದಿದ್ದೇ ಆದರೆ ಶಿವಮೊಗ್ಗ ಮತ್ತು ಮತ್ತಿತರ ಜಿಲ್ಲೆಗಳಲ್ಲಿ ಔಷಧಿ ಬಳಸುವ ಪ್ರಚಾರ ಕಂಡು ಬರುವುದಿಲ್ಲ ಆ ರೀತಿ ಪ್ರಚಾರ ಮಾಡುವುದಕ್ಕೆ ಸರ್ಕಾರ ಏನಾದರು ವ್ಯವಸ್ಥೆ ಮಾಡಿದೆಯೆ ? ಇಲ್ಲಿಯವರೆಗೆ ಮಾಡದಿದ್ದರೆ ಈಗ ಮಾಡುತ್ತಿದೆಯೇ ? ಔಷಧಿಯನ್ನು ಹೇಗೆ ಬಳಸಬೇಕೆಂಬ ಬಗ್ಗೆ ವಿಶೇಷ ಪ್ರಚಾರ ಮಾಡಿ ರೈತರಿಗೆ ಟ್ರೈನಿಂಗ್ ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಿದೆಯೇ ? ಹೇಗೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸದಸ್ಯರು ೪-೫ ಬೆಳೆಗಳಿಗೆ ಸಂಬಂಧಪಟ್ಟ ಹಾಗೆ ಪ್ರಶ್ನೆಗಳನ್ನು ಕೇಳಿದ್ದಾರೆ. ಅಡಿಕೆ, ಬಾಳೆ, ಏಲಕ್ಕಿ, ವೀಳ್ಳೆದಲೆಗೆ ರೋಗ ಬಂದಿರುವುದು ಸರ್ಕಾರದ